KARNATAKA STATE POLICE

# FIRST INFORMATION REPORT

(Under Section 154 Cr.PC)

**Before the Honourable Court of 8th Addl.CMM Court,Nrupatunga Road,Bangalore City**

1. **District :** Bengaluru City **Circle/Sub Division :** J.C. Nagar Sub-Division **PS :** Sanjay Nagar PS

   **Crime No :** 0110/2024 **FIR Date :** 12/06/2024

2. **Act & Section :** IPC 1860 (U/s-506,34,504,387,420,477A,323,327,347,354)

3. **(a) Occurence of Offence Day :** Thursday **From Date :** 21/02/2019 **To Date :** 12/06/2024

   **From Time :** 08:00:00 **To Time :** 08:00:00

   **(b) Information received at the PS :** 12/06/2024 11:10:00 **Written/Oral :** Judicial/Mag

   **(c) Reasons for Delay in reporting by the Complainant / Informant**

   **(d) General Diary reference Entry No. & Time : 3 ,** 11:10:00

4. **(a) Place of occurence with full address**

   No 19, AECS Layout, 2nd stage, 2nd cross, Sanjaynagar,Bengaluru City , Karnataka, 560094

   **(b) Distance from PS :** towards 1.5 km

   **(c) Village :** A.E.C.S LAYOUt **Beat Name :** 2nd Beat

   **(d) If the place belongs to another jurisdiction,PS. Name :**

   **District :**

5. **Complainant/Informant:**

   **(a) Name :** Smt Thrupthi **Father's/Husband's Name :** Madhwaraj

| | | | |
|---|---|---|---|
| **(b) Age** | : 40 | **(c) Occupation** | : Self Employed Others |
| **(d) Religion** | : Hindu | **(e) Caste** | : BRAHMIN |
| **(f) Fax** | : | **(g) Email** | : |

(h) Phone No. :

(i) Nationality : India

(j) Passport No. :

Date of Issue :

(k) Address : No 19, AECS Layout, 2nd stage,2nd cross, Sanjaynagar , Bengaluru City , Karnataka-560094

(l) Sex: Female

(m) Whether complainant has seen the occurence or merely heard of it :

Seen

6. Details of known/suspected/unknown accused with full particulars(Attach separate sheet if necessary)

| Sl.No. | Name / Father Name / Caste / Address | Type | Person Type | Sex | Age | Occupation |
|---|---|---|---|---|---|---|
| 1 | Arun B S(A1) ,No 191, 1st main, 13th cross,RMV 2nd stage, Dollars colonyBengaluru City, Karnataka-560094 | Accused | Common man | Male | 43 | Self Employed Others |
| 2 | Jeevan Kumar(A2) ,No 497/1, 3rd cross,Vijayalakshmi Layout, T DasarahalliBengaluru City, Karnataka-560057 | Accused | Common man | Male | | |
| 3 | Pramod Rao(A3) ,No 37, Hebbala Police Quarters,Near Honnamma Devi templeBengaluru City, Karnataka-560024 | Accused | Common man | Male | | |

7. Details of Victims with full particulars

| Sl.No. | Name | Address | Injury Type | Sex | Age | Occupation |
|---|---|---|---|---|---|---|
| 1 | Smt Thrupthi | No 19, AECS Layout, 2nd stage, 2nd cross, Sanjaynagar Bengaluru City Karnataka-560094 | | Female | 40 years | Self Employed Others |

8. Particulars of Property stolen/involved with value(Attach separate sheet if necessary)

| Sl.No. | Property Type | Item description | Estimated Value (in Rs.) |
|---|---|---|---|
| 1 | | | |

Total Value of the property Stolen / Involved :

9. Inquest Report/U.D. Case No. if any :

10. F.I.R Contents (Attach separate sheet if necessary)

ನ್ಯಾಯಾಲಯದ ಕರ್ತವ್ಯ ಸಿಬ್ಬಂದಿ ಪಿಸಿ 14233 ರವರು ಠಾಣೆಗೆ ಹಾಜರಾಗಿ ನಿಡಿದ ಪಿ.ಸಿ.ಆರ್ ನಂ 6013/2024 ರ ದೂರಿನ ಸಾರಾಂಶವೇನೆಂದರೆ. ದೂರುದಾರರಾದ ತೃಪ್ತಿ ಮತ್ತು ಆಕೆಯ ಗಂಡ ಮಧ್ವರಾಜ್ ರವರು ಇವೆಂಟ್ ಮ್ಯಾನೇಜ್ ಮೆಂಟ್ ಕೆಲಸವನ್ನು ಮಾಡಿಕೊಂಡಿದ್ದು, 2013 ರಲ್ಲಿ ದೂರುದಾರರ ಪತಿಯು ನಡೆಸುತ್ತಿದ್ದ ಇವೆಂಟ್ ಮ್ಯಾನೇಜ್ ಮೆಂಟ್ ವ್ಯವಹಾರಕ್ಕೆ ಅರುಣ್ ಎಂಬಾತನು ನಾನು ವೃತ್ತಿಯಲ್ಲಿ ವೈದ್ಯ ಅಲ್ಲದೇ ವಿ.ಸೋಮಣ್ಣ ಎಂ.ಎಲ್.ಎ ರವರ ಮಗನೆಂದು ಪರಿಚಯ ಮಾಡಿಕೊಂಡಿರುತ್ತಾನೆ, ಅಲ್ಲದೇ ನನ್ನ ತಂದೆ ಕರ್ನಾಟಕ ರಾಜ್ಯದ ಪಕ್ಷಗಳೊಂದಿಗೆ ಉತ್ತಮ ಸಂಪರ್ಕವನ್ನಿಟ್ಟುಕೊಂಡಿದ್ದು, ಅಲ್ಲಿ ನಡೆಸಿದ ಕಾರ್ಯಕ್ರಮಗಳಿಗೆ ನಾನು ಭೇಟಿ ನಿಡಿದ್ದು, ದೂರುದಾರರ ಪತಿ ಆಯೋಜಿಸಿದ್ದ ಕಾರ್ಯಕ್ರಮಗಳ ಬಗ್ಗೆ ಪ್ರಭಾವಿತರಾಗಿದ್ದು,ಅಲ್ಲದೇ ಒಳ್ಳೆಯ ಹೆಸರುಗಳು ಹೊಂದಿರುವ ಬಗ್ಗೆ ತಿಳಿಸಿದರು, ಈಗಿರುವಾಗ್ಗೆ 2017 ರಲ್ಲಿ ಅರುಣ್ ರವರ ಮಗಳ ಹುಟ್ಟುಹಬ್ಬವನ್ನು ಹೊಟೇಲ್ ಒಂದರಲ್ಲಿ ಆಯೋಜಿಸಿದ್ದು, ಈ ಕಾರ್ಯಕ್ರಮವನ್ನು ನಡೆಸಿಕೊಡುವಂತೆ ದೂರುದಾರರ ಪತಿಗೆ ವಹಿಸಿದ್ದು, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾರಿಂದಲೂ ಪ್ರಶಂಸೆ ಪಡೆದಿದ್ದಕ್ಕೆ ಅರುಣ್ ತನ್ನ ಇತರೆ ಫ್ಯಾಮಿಲಿ ಮತ್ತು ಫ್ರೇಂಡ್ಸ್ ಕಾರ್ಯಕ್ರಮಗಳ ಅಯೋಜನೆಯ ಕೆಲಸವನ್ನು ದೂರುದಾರರ ಪತಿಗೆ ವಹಿಸಿಕೊಡಲಾಗಿಯು. ನಂತರ ಅರುಣ್ ದೂರುದಾರರ ಪತಿ ರವರ ಕಾರ್ಯ ವೈಖರಿಯನ್ನು ಮೆಚ್ಚಿ ಆತನೊಂದಿಗೆ ವ್ಯವಹಾರವನ್ನು ನಡೆಸಲು ಮುಂದಾಗಿ, ಇಬ್ಬರು ಸೇರಿ ವ್ಯವಹಾರವನ್ನು ಪ್ರಾರಂಭಿಸಿದ್ದು, ಮೊದಲು ಯಾವುದೇ ಹಣದ ಹೂಡಿಕೆ ಬೇಡ ಕೇವಲ ತಿಳುವಳಿಕೆ ಮತ್ತು ಸ್ಕಿಲ್ ನನ್ನು ತಿಳಿಸುವಂತೆ ಹೇಳಿ ನೈಬರ್ ಹುಡ್ ಎಂಬ ಕಂಪನಿಯನ್ನು ಷರತ್ತುಗಳ ಮೇರೆಗೆ 30% ರಷ್ಟು ಹಣವನ್ನು ಹೂಡಿಕೆ ಮಾಡಿ ಪಾಲುದಾರನಾಗಿ ಒಪ್ಪಂದ ಪತ್ರಗಳನ್ನು (partnership deed) ಹಾಗೂ ಲೀವ್ & ಲೀಜ್ ಅಗ್ರಿಮೆಂಟ್ ನನ್ನು ದಿನಾಂಕ:-21/02/2019 ರಂದು ಮಾಡಿಕೊಂಡು ಸಹಿಯನ್ನು ಪಡೆದು ಕಂಪನಿಯನ್ನು ಪ್ರಾರಂಭಿಸಿದರು. ನೈಬರ್ ಹುಡ್ ಕಂಪನಿಯ ಹಾಗೂ ಬ್ಯಾಂಕಿಗೆ ಸಂಬಂದಪಟ್ಟ ಹೂಡಿಕೆಗಳು, ಪಾವತಿ ಮತ್ತು ಸಂಗ್ರಹಣೆಯ ಸಂಪೂರ್ಣ ಜವಾಬ್ದಾರಿ ಅರುಣ್ ರವರೇ ವಹಿಸಿಕೊಂಡಿದ್ದರು. ಕಂಪನಿಯ ಒಪ್ಪಂದದಂತೆ ಸರಿಯಾದ ಸಮಯದಲ್ಲಿ ಪ್ರಗತಿಯನ್ನು ಸಾಧಿಸಲು ಮತ್ತು ಯೋಜನೆಯನ್ನು ಪೂರ್ಣಗಳೊಸಲು ಸಾಧ್ಯವಾಗಲಿಲ್ಲದ ಪಕ್ಷದಲ್ಲಿ ದೂರುದಾರರ ಪತಿ ಅರುಣ್ ರವರ ಬಳಿ ವ್ಯವಹಾರದ ಕುರಿತು ಕೇಳಲಾಗಿ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ, ನಂತರ ದೂರುದಾರರಾದ ತೃಪ್ತಿ ರವರು ಮತ್ತು ಪತಿ ಇಬ್ಬರು ಕಂಪನಿಗೆ ಹೋದಾಗ ಅರುಣ್ ಕಂಪನಿಯ ಕೆಲಸಗಾರರ ಮುಂದೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿ ಕಂಪನಿಯ ಪಾಲುದಾರಕ್ಕೆ ರಿಸೈನ್ ಮಾಡುವಂತೆ ಒತ್ತಾಯಿಸಿ ಅವಮಾನ ಮಾಡಿರುತ್ತಾರೆ. ವಹಿಸಿಕೊಂಡಿರುವ ಕೆಲಸಗಳನ್ನು ಪೂರ್ಣಗೊಳಿಸಲು ಜಯಪ್ರಕಾಶ್ ಎಂಬುವವರ ಮೂಲಕ ಹೊಸದಾಗಿ ಕಂಪನಿಯಲ್ಲಿ ಕೆಲಸಗಳನ್ನು ಶುರು ಮಾಡಿದ್ದು, ದೂರುದಾರರ ಪತಿಯ ಲಾಭದ ಶೇರ್ ಪ್ರಮಾಣವನ್ನು 30% ರಿಂದ 10% ಗೆ ಇಳಿಕೆ ಮಾಡಿರುತ್ತಾರೆ, ಅಲ್ಲದೇ ಸರಿಯಾದ ಸಮಯದಲ್ಲಿ ಕೆಲಸವನ್ನು ಪೂರ್ಣಗೊಳಿಸಲು ಆದರೆ ಕಂಪನಿಯ ಕೆಲಸಗಾರರಿಗೆ, ಸಿಬ್ಬಂದಿಗಳಿಗೆ ಯಾವುದೇ ರೀತಿಯ ಸಂಬಳವನ್ನು ನೀಡಿರುವುದಿಲ್ಲ, ಈ ಎಲ್ಲಾ ಕಾರಣಗಳಿಂದ ಮಧ್ವರಾಜ್ ರವರೇ ತಮ್ಮ ಸ್ವಂತ ಹಣದಿಂದ ಸಂಬಳವನ್ನು ನೀಡಿರುತ್ತಾರೆ. ನಂತರದ ದಿನಗಳಲ್ಲಿ ಅರುಣ್ ನೈಬರ್ ಹುಡ್ ಕಂಪನಿಯನ್ನು ಸಂಪೂರ್ಣ ತನ್ನ ವಶಕ್ಕೆ ಪಡೆದುಕೊಳ್ಳುವ ಸಲುವಾಗಿ ಕಂಪನಿಯು ಇರುವ ಜಾಗದ ಮಾಲೀಕರನ್ನು ಸಂಪರ್ಕಿಸಿ ಲೀಸ್ ಅಗ್ರಿಮೆಂಟ್ ನನ್ನು ಆತನ ಹೆಸರಿಗೆ ವರ್ಗಾಯಿಸುವಂತೆ ಕೋರಿದ್ದು, ಭೂ ಮಾಲೀಕರು ಆದನ್ನು ಕಂಪನಿಯ ಮಾಲೀಕರ ಅನುಮತಿ ಇಲ್ಲದೇ ವರ್ಗಾಯಿಸಲು ಸಾಧ್ಯವಿಲ್ಲವೆಂದು ತಿಳಿಸಿದ ಮೇರೆಗೆ ಲೀಜ್ ಹಣವನ್ನು ಭೂ ಮಾಲೀಕರಿಗೆ ಕೊಡಲು ನಿಲ್ಲಿಸಿರುತ್ತಾನೆ. ಮತ್ತು ದೂರುದಾರರು ಹಾಗೂ ಅವರ ಪತಿ ಕಂಪನಿಯ ಯೋಜನೆಗಳ ಮೇಲೆ ಹೂಡಿಕೆಯನ್ನು ಮಾಡುವುದು ನಿಲ್ಲಿಸಿರುವುದರಿಂದ ಕೆಲಸಗಳು ವಿಳಂಬವಾಗುತ್ತಿವೆ ಎಂದು ಉದ್ದೇಶ ಪೂರ್ವಕವಾಗಿ ಎಲ್ಲಾ ತಪ್ಪುಗಳನ್ನು ಅವರ ಮೇಲೆ ಒರೆಸಿ ಸುಳ್ಳು ವದಂತಿಗಳನ್ನು ಹಬ್ಬಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ದೂರುದಾರರಾದ ತೃಪ್ತಿ ಮತ್ತು ಆಕೆಯ ಗಂಡ  ರವರು ಕಂಪನಿಯ ಪಾಲುದಾರರಿಂದ ಹೊರಬರಲು ಮುಂದಾಗಿ ಅರುಣ್ ರವರೊಂದಿಗೆ ಮಾತನಾಡಿದಾಗ ಕಂಪನಿಯಿಂದ ಹೊರ ಹೋಗಬೇಕಾದರೆ ಕಂಪನಿಯ ಶೇರ್ ಗಳನ್ನು ಖರೀದಿಸುವಂತೆ ಸೂಚಿಸಿದ್ದು, ಹಣವಿಲ್ಲದ ಕಾರಣ ಖರೀದಿಸಲು ಸಾಧ್ಯವಿಲ್ಲವೆಂದು ದೂರುದಾರರಾದ ತೃಪ್ತಿ ಮತ್ತು ಆಕೆಯ ಗಂಡ  ರವರು ತಿಳಿಸಿದ್ದಕ್ಕೆ ಅವರುಗಳಿಗೆ ಅವಾಚ್ಯ ಶಬ್ದಗಳಿಂದ

ಬೈದು ಹಿಂಸೆಯನ್ನು ನೀಡಿ ನಕಲಿ ಸಹಿಗಳನ್ನು ಶೆರ್ ಪತ್ರಗಳ ಮೇಲೆ ಅರುಣ್ ರವರೇ ಮಾಡಿ ತೃಪ್ತಿ ಮತ್ತು ಆಕೆಯ ಗಂಡ ರವರು ಖರೀದಿ ಮಾಡಿರುವ ರೀತಿಯನ್ನು ಪತ್ರಗಳನ್ನು ಸೃಷ್ಟಿಸಿರುತ್ತಾರೆ. ಅಲ್ಲದೇ ದಿ:-31/03/2020 ರ ಒಳಗೆ ಶೇರ್ ಹಣವನ್ನು ಪಾವತಿ ಮಾಡಬೇಕೆಂದು , ಜೊತೆಗೆ ಬ್ಯಾಂಕ್ ಚೆಕ್ ಗಳನ್ನು ಪಡೆದು ಅದಕ್ಕೆ ಸಹಿಯನ್ನು ಹಾಕುವಂತೆ ಮಧ್ವರಾಜ್ ರವರಿಗೆ ಬೆಲ್ಟ್, ಟೇಬಲ್ ಲ್ಯಾಂಪ್ ಮೂಲಕ ಹೊಡೆದು ಹಿಂಸೆಯನ್ನು ನೀಡಿರುತ್ತಾರೆ, ಮತ್ತು ಮಕ್ಕಳನ್ನು ಕಿಡ್ನಾಪ್ ಮಾಡಿಸುವುದಾಗಿ ಬೆದರಿಕೆಯನ್ನು ಹಾಕಿರುತ್ತಾರೆ. ಹಣ ಪಾವತಿ ಆಗುವವರೆಗೂ ದೂರುದಾರರಾದ ತೃಪ್ತಿ ಮತ್ತು ಆಕೆಯ ಗಂಡ  ರವರ ಬಳಿ ಗೂಂಡಾಗಳನ್ನು ಇಟ್ಟು ನೋಡಿಕೊಳ್ಳುವಂತೆ ತಿಳಿಸಿದ್ದರು. ಈ ಎಲ್ಲಾ ರೀತಿಯ ಹಿಂಸೆಯಿಂದ ಹಣವನ್ನು ಹೊಂದಿಸಿ ಕೊಡುವ ಸಮಯದಲ್ಲಿ ಕೋವಿಡ್-19 ಖಾಯಿಲೆ ಆರಂಭವಾಗಿದ್ದು,ಲಾಕ್ ಡೌನ್ ನಂತ ಸಮಸ್ಯೆ ಎದುರಾದಾಗ ಯಾವುದೇ ಕಾರ್ಯಕ್ರಮಗಳನ್ನು ಮಾಡಲು ಸರ್ಕಾರ ಅನುಮತಿ ನೀಡದೇ ಇದ್ದುದ್ದರಿಂದ ಹಣವನ್ನು ಸಂಗ್ರಹಿಸಲು ಕಷ್ಟಕರವಾಗಿದ್ದು, ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅರುಣ್ ಶೇರ್ ಅಗ್ರಿಮೆಂಟ್ ನನ್ನು ಲೋನ್ ಅಗ್ರಿಮೆಂಟ್ ಆಗಿ ಮಾಡಿಸಿಕೊಂಡು ಪುನ: ದೂರುದಾರರಾದ ತೃಪ್ತಿ ಮತ್ತು ಆಕೆಯ ಗಂಡ ರವರಿಂದ ಬಲವಂತವಾಗಿ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ, ಅರುಣ್ ಜೀವನ ಕುಮಾರ್ ಎಂಬಬಾತನನ್ನು ನೇಮಿಸಿ ದೂರುದಾರರ ಗಂಡ ಹೋದ ಕಡೆಗಳೆಲ್ಲಾ ಆತನನ್ನು ಹಿಂಬಾಲಿಸುವಂತೆ ಹಣವನ್ನು ನೀಡುವಂತೆ ನೇಮಿಸಿರುತ್ತಾನೆ, ಅಲ್ಲದೇ ಒಂದು ಕತ್ತಲೆಯ ರೂಂನಲ್ಲಿ ಬೇರೆ ಬೇರೆ ಕಡೆಗಳಲ್ಲಿ ದೂರುದಾರರ ಗಂಡನನ್ನು ಕೂಡಿಹಾಕಿ ಹಣವನ್ನು ತಂದು ಕೊಡುವಂತೆ ಹೊಡೆದು, ಮುಖಕ್ಕೆ ಉಗುಳುವುದು, ಬ್ಲೇಡ್ ನಿಂದ ಕುಯ್ಯುವುದರ ಮೂಲಕ ಹಿಂಸೆಯನ್ನು ನೀಡುತ್ತಿದ್ದರು. ಈ ಎಲ್ಲಾ ಕಾರಣಗಳಿಂದ ದೂರುದಾರರ ಗಂಡ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದು, ಆ ಸಮಯದಲ್ಲಿಯೂ ಸಹ ಅರುಣ್ ನನಗೆ ಹಣ ಬೇಕೆಂದು ಕೇಳಿದ್ದಕ್ಕೆ 81 ಲಕ್ಷ ರೂ ಹಣವನ್ನು ನಿಡಿದ್ದು, 76 ಲಕ್ಷ ಬ್ಯಾಂಕ್ ಮೂಲಕ ಮತ್ತು 08 ಲಕ್ಷ ನಗದು ರೂಪದಲ್ಲಿ ನೀಡಿರುತ್ತಾರೆ. ಇದಲ್ಲದೇ ದೂರುದಾರರು ಗಂಡನನ್ನು ಬಿಡುವಂತೆ ಕೇಳಿಕೊಂಡರು ಸಹ ಬಿಡದೇ ಹಿಂಸೆಯನ್ನು ನೀಡಿ ಪುನ: 65 ಲಕ್ಷ ರೂಗಳ ಲೋನ್ ಅಗ್ರಿಮೆಂಟ್ ಗೆ ಸಹಿಯನ್ನು ಹಾಕಿಸಿಕೊಂಡಿರುತ್ತಾನೆ. ದೂರುದಾರರ ಗಂಡ ಯಾವುದೇ ಕೆಲಸವಿಲ್ಲದೆ, ಕಾರ್ಯಗಳಿಲ್ಲದೇ ಹಣ ಹೊಂದಿಸಲು ಸಾಧ್ಯವಾಗದೇ ಅರುಣ್ ಮತ್ತು ಆತನು ನೇಮಿಸಿದ ವ್ಯಕ್ತಿಗಳಿಂದ ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದು, ಅರುಣ್ ದೂರುದಾರರ ಮನೆಯ ಮುಂದೆ ಪ್ರಮೋದ್ ಕುಮಾರ್ ಎಂಬಾತನನ್ನು ಬಿಟ್ಟು ಅವರ ಚಲನ-ವಲನಗಳನ್ನು ಗಮನಿಸುವಂತೆ  ನೇಮಕ ಮಾಡಿ, ಮನೆಗೆ ನುಗ್ಗಿ ದೂರುದಾರರ ಗಂಡನನ್ನು ಹುಡುಕಿ ಕಾಣದೇ ಇದ್ದಾಗ ದೂರುದಾರರಿಗೂ ಮತ್ತು ಮಕ್ಕಳಿಗೂ ಕಪಾಳಕ್ಕೆ ಹೊಡೆದು ಹಣವನ್ನು ಅರುಣ್ ರವರಿಗೆ ಕೊಡುವಂತೆ ಹಿಂಸೆಯನ್ನು ನೀಡಿರುತ್ತಾರೆ. ದೂರುದಾರರಿಗೆ, ಆಕೆಯ ಗಂಡ ಮತ್ತು ಮಕ್ಕಳಿಗೆ ಮಾನಸಿಕವಾಗಿ ಮತ್ತು ದೈಗಿಕವಾಗಿ ಹಿಂಸೆಯನ್ನು ನೀಡುತ್ತಿರುವ ಅರುಣ್, ಜೀವನ್ ಕುಮಾರ್ ಮತ್ತು ಪ್ರಮೋದ್ ರಾವ್ ರವರುಗಳ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.

11. **(a) Action Taken :** Investigation

**(b) Is the F.I.R read over and explained in his/her language to the complainant and a copy given to the complainant free of cost? :** Yes

**(c) If the Police Officer does not proceed to the spot for investigation or if he declines to investigate.**

**U/S 157 Cr.PC provision (a)or (b)the reasons there of should be mentioned :**

**Action taken**

12. **Signature/Thumb impression of the complainant**

13. **Date and time of dispatch to the Court :** 12/06/2024 12:10:00

**14. Name of PC/HC who carried the FIR to the Court :** BANDU RAJESHA PINJAR ,
PC 14233

**Read Over and Found to be correct**

**Date and Time :** 12/06/2024 11:40:00

**Signature of the SHO**

**Name:** RAVICHANDRA - PSI

**Copy to :** Superintendent of Police/Commissioner of Police